

ಎಡದಿಂದ ಬಲಕ್ಕೆ :

1. ಅವನ ನಿಷ್ಠೆಯನ್ನೇ ಅನುಕರಿಸುವ ಆಚರಣೆ (4)
3. ಸಾಮಾನು ತರಲು ತಿಂಗಳ ಕೊನೆಯೇ ಸರಿಯೇ ? (3)
4. ಅಮೂಲ್ಯ ಪುಸ್ತಕಗಳನ್ನು ಹೊತ್ತು ತರಲು ತಕ್ಕದ್ದು ಶಿರವೇ ತಾನೇ?(3)
6. ಪರ್ವತದ ಪಕ್ಕ ಬೆಳೆದ ಫಲ ಸಂಪೂರ್ಣ ಮಾಗಿದೆ (4)
7. ಕರ್ತಾರನದೇ ಸೃಷ್ಟಿ, ಮುತ್ತು ಹವಳ ಮೂಲ ಸಾಗರ (4)
9. ಸುಮ್ಮನಾಗುವುದೇ ಇಲ್ಲ, ಆಕೆಯದು ಸದಾ ಮಂದಹಾಸ (4)
12. ಸಾಹಸವನ್ನು ಕೈಗೊಳ್ಳುವವರ ಒಡನಾಟ ಹೇಗೆ ? (4)
14. ಪೂ ಮಾಲೆ ತೊಡಿಸಿದೊಡನೆ ಏಕಿಂಥ ಸೊಕ್ಕು ? (3)
15. ವದನವನ್ನು ಕಂಡರೇ ತಿಳಿಯುತ್ತದೆ, ಆತನ ಯಾತನೆ (3)
16. ಹನ್ನೊಂದಕ್ಕೆ ಏಕಾದಶವಾದರೆ ಹಾಗೆಯೇ ಹದಿಮೂರಕ್ಕೆ ? (4)

ಮೇಲಿಂದ ಕೆಳಕ್ಕೆ :

1. ಆತಂಕ ಬೆರೆತ ದಿನಗಳೇ ಬಹಳ ಹೆಚ್ಚು (4)
2. ಮೋಸದ ಕಾರ್ಯವನ್ನು ಪತ್ತೆ ಹಚ್ಚಿದ್ದಕ್ಕೆ ವಂದನೆ (4)
3. ವೇಗವಾಗಿ ಮುಂದುವರಿಯಲು ಆತನ ಮಾರ್ಗವೇ ಆದರ್ಶ (3)
5. ಕೊಳಕು ಕಿಂಚಿತ್ತೇ ಇದ್ದರೂ ದೋಷವೇ ತಾನೇ ? (3)
6. ಆತ ಆಲಾಪನೆ ಆರಂಭಿಸಿದ್ದೇ ತಡ, ಎಲ್ಲರೂ ಓಡಿಹೋದರಲ್ಲ ! (4)
8. ಸರಿ ದಾರಿ ತೋರಿಸ ಹೋಗಿ ತಲೆ ಕೆಳಗಾದ ಯಜಮಾನ (4)
10. ಸರಿಗಮ ಕಲಿವ ಹಾದಿ ಬಹಳ ಸುಲಭ ಹೌದೇ ? (3)
11. ಗೌರವಕ್ಕೆ ಪಾತ್ರನಾದವ ಅಧ್ಯಾಪಕನ ಮಗ (4)
12. ಭಾರೀ ಸಂಶಯವನ್ನು ಹುಟ್ಟುಹಾಕಿದ ಸಂದರ್ಭ ಅದು (4)
13. ಆತನ ವಸನದಲ್ಲಿ ಅದೆಂಥ ಕಂಪು ? (3)

## 14-12-2017ರ ಉತ್ತರಗಳು

ಎಡದಿಂದ ಬಲಕ್ಕೆ :

1. ವರ್ಣಮಾಲೆ 3. ವಿವರ್ಣ ; 4. ಕ್ಷೆರಸೂ (=ಸೂರಕ್ಕಿ ಹಿಂದು ಮುಂದು) ; 6. ನೆಲಸಿಗ ; 7. ಭರತ ; 9. ನೆನೆಸು ; 11. ಸುಮಾರು ; 13. ಪುದೀನ ; 15. ಉದುರಿಸು ; 17. ಕರುಣೆ ; 18. ಹಾವುಗೆ ; 19. ಸುಧಾರಸ

ಮೇಲಿಂದ ಕೆಳಕ್ಕೆ :

1. ವರ್ಣನೆ ; 2. ಲೆಕ್ಕಿಗ ; 3. ವಿಸ್ತಾರ ; 5. ಸೂಚನೆ ; 7. ಭರಿಸು ; 8. ತಳಿರು ; 9. ನೆನೆಪು ; 10. ಸುಮನ ; 12. ಮಾಲೀಕ ; 14. ದೀವಿಗೆ ; 15. ಉಣಿಸು ; 16. ಸುಹಾಸ

## ಪ್ರಶ್ನಾಂಕಣ

# ಟ್ಯೂಲಿಪ್: ಏನು ವಿಶೇಷ?

ಟ್ಯೂಲಿಪ್ ಅದೊಂದು ಮೋಹಕ ಕುಸುಮ (ಚಿತ್ರ 1, 2). ಗುಲಾಬಿಯಂತೆಯೇ ಧರೆಯ ಅತ್ಯಂತ ಸುಂದರ, ಅತ್ಯಂತ ಆಕರ್ಷಕ, ಅತ್ಯಂತ ಜನಪ್ರಿಯ ಕುಸುಮಗಳ ಅಗ್ರ ಪಂಕ್ತಿಯಲ್ಲಿ ಅದರ ಸ್ಥಾನ. 'ಲಿಲಿಯೇಸಿಯೇ' ಕುಟುಂಬಕ್ಕೆ ಸೇರಿದ ಟ್ಯೂಲಿಪ್ ಗಳಲ್ಲಿ ನೈಸರ್ಗಿಕವಾದ ಎಪ್ಪತ್ತೈದು ಪ್ರಭೇದಗಳಿವೆ. ಟ್ಯೂಲಿಪ್ ಒಂದು ಬಹುವಾರ್ಷಿಕ ಸಸ್ಯ. ಗೆಡ್ಡೆಯಿಂದ ಮೊಳಕೆಯೊಡೆವ ಟ್ಯೂಲಿಪ್ ಗಿಡ ನಾಲ್ಕರಿಂದ ಇಪ್ಪತ್ತೆಂಟು ಅಂಗುಲ ಎತ್ತರಕ್ಕೆ ಬೆಳೆಯುತ್ತದೆ. ಒಂದು ಗೆಡ್ಡೆಯಿಂದ ಒಂದೇ ಒಂದು ಗಿಡ ಹುಟ್ಟುತ್ತದೆ ; ವಸಂತ ಕಾಲ ಬಂದೊಡನೆ ಪ್ರತಿ ಪ್ರಭೇದದ ಗಿಡವೂ ಅದರದೇ ವಿಶಿಷ್ಟವಾದ ಕೆಂಪು, ಬಿಳಿ, ಹಳದಿ ಇತ್ಯಾದಿ ಒಂದೇ ಒಂದು ಬಣ್ಣದ ಒಂದೇ ಒಂದು ಹೂವನ್ನು ಅರಳಿಸುತ್ತದೆ. (ಪ್ರಸ್ತುತ ಹೈಬ್ರಿಡೀಕರಣದಿಂದಾಗಿ ಬಹು ವರ್ಣಗಳ ಹೂ ಬಿಡುವ ನೂರಾರು ಕೃತಕ ಟ್ಯೂಲಿಪ್ ಪ್ರಭೇದಗಳು ಲಭ್ಯ ಇವೆ ). ಕೆಲವೇ ದಿನಗಳಲ್ಲಿ ಪರಾಗ ಸ್ಪರ್ಶದ ನಂತರ ಹೂವಿನ ಜೊತೆಗೆ ಸಸ್ಯವೂ ಬಾಡುತ್ತದೆ. ಆದರೆ ಆ ವೇಳೆಗೆ ನೆಲದೊಳಗಿನ ಮೂಲ ಗೆಡ್ಡೆಯೊಳಗೆ ಎರಡರಿಂದ ನಾಲ್ಕು ಹೊಸ ಗೆಡ್ಡೆಗಳು ರೂಪುಗೊಂಡಿರುತ್ತವೆ. ಆ ಪ್ರತಿಯೊಂದು ಗೆಡ್ಡೆಯೂ ಮುಂದಿನ ವಸಂತದಲ್ಲಿ ಸಸ್ಯವಾಗಿ ಹೂ ಬಿಡುತ್ತದೆ. ಇದು ಟ್ಯೂಲಿಪ್ ನ ಜೀವನ ಕ್ರಮ; ಸಂತಾನ ವರ್ಧನಾ ಕ್ರಮ.




ಜಗದಾದ್ಯಂತ ತೋಟದ ಸಸ್ಯವಾಗಿಯೂ, ಅಲಂಕರಣ ಕುಸುಮವಾಗಿಯೂ ಟ್ಯೂಲಿಪ್ ಬಹಳ ಜನಪ್ರಿಯ. ನೆದರ್ಲ್ಯಾಂಡ್ಸ್ ರಾಷ್ಟ್ರ ಟ್ಯೂಲಿಪ್ ಗಳ ತವರು. ನೆದರ್ಲ್ಯಾಂಡ್ಸ್ ನ ಒಂದು ಪ್ರಧಾನ 'ವಾಣಿಜ್ಯ ಬೆಳೆ'ಯೂ ಆಗಿರುವ ಈ ಹೂವು ಆ ದೇಶದ ಅನಧಿಕೃತ ರಾಷ್ಟ್ರೀಯ ಕುಸುಮ ಕೂಡ. ಪ್ರತಿ ವರ್ಷ ಆ ದೇಶ ಉತ್ಪಾದಿಸಿ ಜಗತ್ತಿನ ಎಲ್ಲೆಡೆಗೆ ನಿರ್ಯಾತ ಮಾಡುವ ಟ್ಯೂಲಿಪ್ ಗೆಡ್ಡೆ ಮತ್ತು ಹೂವುಗಳ ಸಂಖ್ಯೆ ಸಮೀಪ ಒಂಬತ್ತು ಶತ ಕೋಟಿಯಷ್ಟಿದೆ !

ಟ್ಯೂಲಿಪ್ ಕುಸುಮಗಳನ್ನು ಕುರಿತಂತೆ ಇಸವಿ 1630 ರ ದಶಕದಲ್ಲಿ ನೆದರ್ಲ್ಯಾಂಡ್ಸ್ ನಲ್ಲಿ ಸಂಭವಿಸಿದ ಒಂದು ಸಮೂಹ ಸನ್ನಿ 'ಟ್ಯೂಲಿಪೋಮೇನಿಯಾ' ಎಂದೇ ಮಾನವೇತಿಹಾಸದಲ್ಲಿ ಸುಪ್ರಸಿದ್ಧ. ಆ ಕಾಲದಲ್ಲಿ ಅಲ್ಲಿ ಹಿಂದೆಂದೂ ಕಾಣದಿದ್ದ ಘಟನೆಯೊಂದು ನಡೆದಿತ್ತು. ಒಂದು ವಿಶಿಷ್ಟ ವೈರಸ್ ನ ಸೋಂಕಿನಿಂದಾಗಿ ಅಲ್ಲಲ್ಲಿ ಕೆಲ ಕೆಲವು ಟ್ಯೂಲಿಪ್ ಗಿಡಗಳು ಬಹುವರ್ಣಗಳ ಹೂಗಳನ್ನು ಅರಳಿಸಿದ್ದುವು. ಹಾಗೆ ರೋಗಗ್ರಸ್ತವಾಗಿ, ಅಲ್ಪಾಯುಷಿಗಳೂ ಆಗಿದ್ದ ಟ್ಯೂಲಿಪ್ ಸಸ್ಯಗಳ ಗೆಡ್ಡೆಗಳನ್ನು ಅಜ್ಞಾನದಿಂದ "ಅತ್ಯದ್ಭುತ ಮತ್ತು ಅತ್ಯಮೂಲ್ಯ" ಎಂದು ಭಾವಿಸಿ ಅಲ್ಲಿನ ಹೇರಳ ಶ್ರೀಮಂತರು ಭಾರೀ ಲಾಭದ ಆಸೆಯಿಂದ ಕೇಳಿದಷ್ಟು ಹಣ ತೆತ್ತು ಸಂಗ್ರಹಿಸತೊಡಗಿದರು. ಅದಕ್ಕಾಗಿ ತಮ್ಮ ಸಕಲ ಆಸ್ತಿಪಾಸ್ತಿಗಳನ್ನೂ ಮಾರಿದರು ಕೂಡ. ಹಾಗೆ ರೋಗಿಷ್ಠ ಟ್ಯೂಲಿಪ್ ಗೆಡ್ಡೆಗಳ ಒಡೆಯರಾದವರೆಲ್ಲರೂ ಅನತಿ ಕಾಲದಲ್ಲೇ ಸಹಜವಾಗಿಯೇ ಸರ್ವಸ್ವವನ್ನೂ ಕಳೆದುಕೊಂಡು ಭಿಕ್ಷುಕರಾದರು. ಇಂಥದೊಂದು ಅಜ್ಞಾನ ಜನ್ಯ ದುರಂತಕ್ಕೆ ಕಾರಣವಾದದ್ದೂ ಟ್ಯೂಲಿಪ್ ನದೇ ಒಂದು ಪರಮ ವಿಶೇಷ !

■ ಎನ್. ವಾಸುದೇವ್